SMT. NAGAMMA C. KESHAVAMURTHY (Minister of State for Primary and Secondary Education) .—

(a) Yes.

(b) Yes.

(c) Government has since been accorded administrative approval for construction of the building.

(d) Efforts will be made to commence the work during the year 1981-82.

ಶ್ರೀ ಕೆ. ಹೆಚ್. ಹನುಮೇಗೌಡ.—೧೯೮೦-೮೧ನೇ ಇಸವಿಯಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಇಟ್ಟಿದ್ದರೂ, ಆಡಳಿತಾತ್ಮಕ ಒಪ್ಪಿಗೆ ಕೊಡದೇ ಇರುವುದಕ್ಕೆ ಕಾರಣವೇನು ?

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.—ಪ್ರೊಪೋಸಲ್ ಬರುವಾಗಲೇ ತಡವಾಯಿತು ೮೦-೫-೮೨ ರಲ್ಲಿ ಆಡಳಿತಾತ್ಮಕ ಒಪ್ಪಿಗೆ ಕೊಡಲಾಗಿದೆ, ೧೫-೫-೮೨ರಲ್ಲಿ ತಾಂತ್ರಿಕ ಮಂಜೂರಾತಿ ಕೂಡ ಕೊಡ ಲಾಗಿದೆ ಇನ್ನು ೧೫ ದಿವಸದಲ್ಲಿ ಕಟ್ಟಡದ ಕೆಲಸ ಪ್ರಾರಂಭಿಸಲಾಗುವುದು.

ಶ್ರೀ ಕೆ. ಹೆಚ್. ಹನುಮೇಗೌಡ.—ತಾಂತ್ರಿಕ ಮಂಜೂರಾತಿ, ಆಡಳಿತಾತ್ಮಕ ಒಪ್ಪಿಗೆ ದೊರೆ ತ್ತಿದ್ದರೂ ಕೂಡ ಇದುವರೆಗೆ ಟೆಂಡರ್ ಕರೆಯದೇ ಇರುವುದಕ್ಕೆ ಕಾರಣ ಏನು ?

ಶ್ರೀಮತಿ ಸಿ, ನಾಗಮ್ಮ ಕೇಶವಮೂರ್ತಿ.—ಲೋಕೋಪಯೋಗಿ ಇಲಾಖೆಯವರು ಕೆಲವೊಂದು ನಿಯಮಾವಳಿಗಳನ್ನು ಫಾಲೋ ಮಾಡಬೇಕಾಗುತ್ತದೆ. ಆದಷ್ಟು ಜಾಗ್ರತೆ ಕಟ್ಟಡ ತೆಗೆದುಕೊಳುವುದಕ್ಕೆ ಹೇಳುತ್ತೇನೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಈ ವರ್ಷದ ಬಡ್ಜೆಟ್ಟಿನಲ್ಲಿ ಈ ಕಟ್ಟಡವನ್ನು ಕಟ್ಟುವುದಕ್ಕೆ ಎಷ್ಟು ಹಣವನ್ನು ಒದಗಿಸಿದ್ದೀರಿ ?

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.—ಈ ವರ್ಷಕ್ಕೆ ೮೦,೦೦೦ ರೂಪಾಯಿ ಒದಗಿಸಿದ್ದೇವೆ. ಈ ಹಣ ಪೂರ್ತಿಯಾಗಿ ಖರ್ಚಾದ ಮೇಲೆ ಇನ್ನು ಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

Re-Establishment of Sugar-Cane Cess Fund Division.

659. SRI M. S. ATMANANDA (Mandya).—Will the Minister for Public Works be pleased to state :—

(a) the total amount realised to the Government of Karnataka in the form of purchase tax levied on Sugar produced from the ;

1. Mysugar Co., Ltd., Mandya ;
2. Pandavapura Sahakara Sakkare Karkhane Ltd., Pandavapura.
3. Sri Chamundeswari Sugar Ltd., Kalamuddanadoddi.

(b) out of this, the amount spent on the improvement of roads in the cane growing areas of the above factories under Sugarcane Cess Fund Head.

(c) will the Government consider the re-establishment of SCCF Dn. as it was there previously in the Mysore Sugar Co., Ltd., Mandya Cane growing area.

SRI KAGODU THIMMAPPA (Minister for Public Works).—

(a) The Total amount realised to Government is as detailed below -

Rs. in lakhs :—	1978-79	1979-80	1980-81	Total
	...	...	60.50	60.50
	42.34	25.58	30.07	97.99
	...	...	...	...
Total ...	42.34	25.58	90.57	158.49

(b)—

Name of the Sugar Factory	Amt. spent yearwise (Rs. in lakhs)			
	1978-79	1979-80	1980-81	Total
Mysugar Co., Ltd..	1.19	1.56	5.39	8.14
Pandavapura Sahakara Sakkare Karkhone Ltd..	0.54	1.73	1.67	3.94
Sri Chamundeswari Sugar Ltd.,	1.40	1.02	8.08	10.50
Total ...	3.13	4 31	15.14	22.58

(c) As the existine organisational arrangement for construction and maintenance of roads in Sugar Factory arcas is satisfactory the question of re-establishment of Sugarcane Cess Fund Divisions does not arise.

ಶ್ರೀ ಎಂ.ಎಸ್. ಆತ್ಮಾನಂದ.—ಆಯಾಯಾ ಕಾರ್ಖಾನೆಗಳಲ್ಲಿರುವಂತ ಕಬ್ಬು ತೆರಿಗೆ ನಿಧಿ ವಿಭಾಗವನ್ನು ಸರ್ಕಾರದವರು ಏಕಾಏಕಿ ಕೈಬಿಡಲು ಕಾರಣವೇನು.? ರಸ್ತೆ ಅಭಿವೃದ್ಧಿ ಮಾಡುವಂತ ಜವಾಬ್ದಾರಿ ಯಾರಿಗೆ ಸೇರಿದೆ?

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ, ಬಹಳ ವರ್ಷಗಳಿಂದಲೂ ರೆಗ್ಯೂಲರ್ ಡಿವಿಜನ್ನೇ ಮಾಡಿಕೊಂಡು ಬರುತ್ತಿದೆ. ಇದನ್ನು ರದ್ದು ಮಾಡುವುದಕ್ಕೆ ಆ ಸಂದರ್ಭದಲ್ಲಿ ಯಾವ ಸನ್ನಿವೇಶ ಇತ್ತೋ ಗೊತ್ತಿಲ್ಲ.

ಶ್ರೀ ಹೆಚ್. ಶಿವಪ್ಪ.—ಸ್ವಾಮಿ, ಪ್ರತ್ಯೇಕ ವಿಭಾಗ ಇದ್ದುದರಿಂದ ಕಬ್ಬು ಸಾಗಾಣಿಕೆ ಮಾಡಲಿಕ್ಕೆ ಸೂಕ್ತವಾದ ವ್ಯವಸ್ಥೆ ಮಾಡಲಾಗುತ್ತಿತ್ತು. ರೆಗ್ಯೂಲರ್ ಡಿವಿಜನ್‌ನಿಂದ ಕಾಲಕ್ಕೆ ಸರಿಯಾಗಿ ಕೆಲಸ ಆಗುತ್ತಿಲ್ಲ. ಸರ್ಕಾರದವರು ಪ್ರತ್ಯೇಕವಾದ ವಿಭಾಗ ಮಾಡುವುದಕ್ಕೆ ಯೋಚನೆ ಮಾಡುತ್ತಾರೆಯೆ?

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ, ರಾಜ್ಯದ ಎಲ್ಲಾ ಜಿಲ್ಲೆಯೂ ಸೇರಿ ಸುಮಾರು ೩,೬೩೨ ಕಿಲೋಮೀಟರ್ ರಸ್ತೆ ಬರುತ್ತೆ. ಆದರಲ್ಲಿ ಮಂಡ್ಯ ಜಿಲ್ಲೆ ಒಂದರಲ್ಲಿಯೇ ೧೫೦೦ ಕಿಲೋಮೀಟರ್ ಇದೆ. ಮಂಡ್ಯ ಜಿಲ್ಲೆ ಬಿಟ್ಟರೆ ಉಳಿದ ಜಿಲ್ಲೆಗಳಲ್ಲಿ ಕೆಲಸದ ಭಾರ ಸಾಕಾಗುವುದಿಲ್ಲ. ಕೊಟ್ಟಂತ ಹಣವನ್ನು ಸಂಪೂರ್ಣವಾಗಿ ಖರ್ಚು ಮಾಡಿದ್ದೇವೆ. ಪ್ರತ್ಯೇಕವಾಗಿ ಮಾಡುವುದರಿಂದ ಹೆಚ್ಚು ಹೇರು ಬರುವುದಿಲ್ಲ. ಇದನ್ನು ಮತ್ತೆ ಪರಿಶೀಲನೆ ಮಾಡಬೇಕಾದ ಸನ್ನಿವೇಶ ಕಾಣುವುದಿಲ್ಲ.

ಶ್ರೀ ಹೆಚ್. ಶಿವಪ್ಪ.—ಪ್ರತ್ಯೇಕವಾಗಿ ಮಾಡಿ; ಒಬ್ಬಬ್ಬರು ಎ ೫. ಗಳನ್ನು ಕೊಟ್ಟು, ತೀಪ್ರವಾಗಿ ಕೆಲಸ ಮಾಡಿಸಬಹುದು; ಇದರ ಬಗ್ಗೆ ಯೋಚನೆ ಮಾಡುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ, ಇಡೀ ರಾಜ್ಯಕ್ಕೆ ಒಂದು ವಿಭಾಗ ಮಾಡುವು ದರಿಂದ ಅದಕ್ಕೆ ಬೇಕಾದಂತ ಮಿಷನರಿಗಳು, ಸಾಮಾನು ಸರಂಜಾಮುಗಳು ಒದಗಿಸುವುದಕ್ಕೆ ಕಷ್ಟ ಇದೆ. ಇರತಕ್ಕಂಥ ವಿಭಾಗಗಳಲ್ಲಿರತಕ್ಕ ಸಾಮಗ್ರಿಗಳನ್ನು ಮತ್ತು ವಾಹನಗಳನ್ನು ಇತರೇ ಸಿಬ್ಬಂದಿ ವರ್ಗ ದವರನ್ನು ಬಳಸಿಕೊಂಡು ಕೆಲಸ ಮಾಡುವುದರಿಂದ ಕೆಲಸ ಚುರುಕಾಗಿ ನಡೆಯುತ್ತದೆ. ಬೆಂಗಳೂರು ವಿಭಾಗ ಮಾಡಿ; ಬೆಳಗಾಂನಲ್ಲಿ ಕೆಲಸ ಮಾಡಬೇಕೆಂದು ಬಹಳ ಕಷ್ಟವಾಗುತ್ತದೆ. ಕೆಲವು ಕಡೆ ರಸ್ತೆಗಳು ಚೆನ್ನಾಗಿಲ್ಲ; ಹೆಚ್ಚು ಹಣ ಬೇಕಾಗುತ್ತದೆ. ಈಗಾಗಲೇ ಮಾನ್ಯ ಹಣಕಾಸಿನ ಸಚಿವರಲ್ಲಿ ಮಾತನಾಡಿ ೭೦ ಲಕ್ಷ ರೂಪಾಯಿಗಳನ್ನು ಪಡೆದಿದ್ದೇವೆ. ಇನ್ನಷ್ಟು ಹಣ ಪಡೆದುಕೊಂಡು ರಸ್ತೆಗಳನ್ನು ಚೆನ್ನಾಗಿ ಇಡುವುದಕ್ಕೆ ವ್ಯವಸ್ಥೆ ಮಾಡಲಾಗುವುದು.

ಶ್ರೀ ಭೀಮಣ್ಣ ಖಂಡ್ರೆ.—ಸ್ವಾಮಿ, ರಾಜ್ಯದಲ್ಲಿರತಕ್ಕ ಪ್ರತಿಯೊಂದು ಸಕ್ಕರೆ ಕಾರ್ಖಾನೆ ಗಳಿಂದಲೂ ಕಳೆದ ಆರು ವರ್ಷಗಳಿಂದಲೂ ತೆರಿಗೆಯನ್ನು ವಸೂಲ್ಮಾಡುತ್ತಿದ್ದೀರಿ. ವಸೂಲಾದಂತ ಹಣದಲ್ಲಿ ಕನಿಷ್ಟ ೧೦ ಭಾಗವನ್ನು ಖರ್ಚು ಮಾಡಿಲ್ಲ. ಪ್ರತಿಯೊಂದು ಫ್ಯಾಕ್ಟರಿಯಿಂದಲೂ ಕನಿಷ್ಟ ಹತ್ತು ಲಕ್ಷ ರೂಪಾಯಿ ಬರುತ್ತದೆ. ಹೈಪವರ್ ಕಮಿಟಿಯವರು ಕೂಡ ಈ ಹಣ ಖರ್ಚು ಮಾಡುವು ದಕ್ಕೆ ಒಪ್ಪಿದ್ದರು. ಇದರ ಬಗ್ಗೆ ತಾವು ಏನು ಹೇಳುತ್ತೀರಿ?

ಶ್ರೀ ಕಾಗೋಡು ತಿಮ್ಮಪ್ಪ.—ಈಗ ಇರತಕ್ಕ ನಿರ್ದೇಶನದ ಪ್ರಕಾರ ಒಟ್ಟು ಸಂಗ್ರಹಣೆ ಆಗತಕ್ಕ ಹಣದಲ್ಲಿ ಎಂಟನೇ ಒಂದು ಭಾಗ ಅಂದರೆ ಎರಡು ರೂಪಾಯಿ ರಸ್ತೆಗೋಸ್ಕರ ಖರ್ಚು ಮಾಡಬೇಕಾ ದಂಥಾದ್ದು ಇದೆ. ಅದರ ಪ್ರಕಾರ ೪೦ ಲಕ್ಷ ರೂಪಾಯಿ ಬರಬೇಕು. ೭೦ ಲಕ್ಷ ರೂಪಾಯಿ ಕೊಡ ಲಾಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಆ ರೀತಿ ಹೇಳಿದ್ದರೆ. ಅದನ್ನು ಪರಿಶೀಲನೆ ಮಾಡೋಣ.

ಶ್ರೀ ಎಂ.ಎಸ್. ಆತ್ಮಾನಂದ.—ಸಕ್ಕರೆ ಕಂಪನಿ ಪ್ರದೇಶದಲ್ಲಿರತಕ್ಕ ರಸ್ತೆಗಳಿಗೆ ಖರ್ಚು ಮಾಡು ತ್ತಿರುವ ಹಣ ಸಾಲದು, ಅಲ್ಲಿ ೧೦–೧೨ ಟನ್ ಕಬ್ಬು, ಲಾರಿಗಳು ಸಾಗಿಸಿಕೊಂಡು ಬರಬೇಕಾಗುತ್ತದೆ. ಆದ್ದರಿಂದ, ಈಗ ಪ್ರತಿ ಕಿಲೋಮೀಟರ್‌ಗೆ ಏನು ಹಣ ಖರ್ಚು ಆಗತ್ತಿದೆ. ಅದಕ್ಕಿಂತಲೂ ಹೆಚ್ಚು ಹಣ ಖರ್ಚು ಮಾಡುವ ಬಗ್ಗೆ ಸರ್ಕಾರ ಪರಿಶೀಲಿಸುತ್ತದೆಯೇ?

ಶ್ರೀ ಕಾಗೋಡು ತಿಮ್ಮಪ್ಪ.—ಒಂದು ಕಿಲೋಮೀಟರ್ ರಸ್ತೆಗೆ ನಿರ್ವಹಣಾ ವೆಚ್ಚ ಒಂದು ಲಕ್ಷ ರೂಪಾಯಿ ಕೊಡುತ್ತಿದ್ದೇವೆ. ಈ ಎಲ್ಲಾ ರಸ್ತೆ, ವಿಲೇಜ್ ಸ್ಟ್ಯಾಂಡರ್ಡ್ ರೋಡ್ ಇರತಕ್ಕಂತಾದ್ದು, ಈಚೆಗೆ ದುಬಾರಿಯಾಗಿರುವುದರಿಂದ ಅದಕ್ಕೆ ಸಮನಾಗಿ ನಾವು ಜಾಸ್ತಿ ಮಾಡಬೇಕೆಂದು ಇದ್ದೇವೆ, ಜಾಸ್ತಿ ಮಾಡುವ ಬಗ್ಗೆ ಅದು ಪರಿಶೀಲನೆಯಲ್ಲಿದೆ. ಹಣಕಾಸಿನ ಇಲಾಖೆಯ ಜೊತೆ ಅದರ ಬಗ್ಗೆ ಆಲೋಚನೆ ಮಾಡಬೇಕಾಗುತ್ತದೆ, ತಮ್ಮ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ.

Housing facility to the Government Employees in Dharwar City.

725 Sri Bhavu Rao Deshpande (Dharwad).—Will the Minister for Housing and Urban Development be pleased to state.—

(a) the number of employees working in Dharwad in different Departments of the State Government ;

(b) whether scheme to provide residential accommodation to this class of employees will be taken up considering the actute scarcity of residential houses ?